ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್.-2024: ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ, ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

**ವಿಷಯ:-** ವಿಶ್ವವಿದ್ಯಾನಿಲಯದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಲಘು ಉಪಹಾರ/ಭೋಜನಾ ಕಾಫಿ/ಟೀ ಇತ್ಯಾದಿಗಳನ್ನು ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ಸಿಂಡಿಕೇಟ್ ಸಭೆಯ ನಿರ್ಣಯ ದಿನಾಂಕ: 30-12-2021.
2. ಈ ಕಛೇರಿ ಆದೇಶ ಸಂಖ್ಯೆ:ಜಿಎಲ್5/172/2021-22, ದಿನಾಂಕ:29.01.2022.
3. ಕಾರ್ಯಪಾಲಕ ಅಭಿಯಂತರರ ಪತ್ರ ಸಂಖ್ಯೆ:ಯು.ಇ.ಡಿ:1642/2021-22, ದಿನಾಂಕ: 10.02.2022.
4. ಈ ಕಛೇರಿ ಆದೇಶ ಸಂಖ್ಯೆ:ಜಿಎಲ್5/172/2021-22, ದಿನಾಂಕ: 04.03.2022.
5. ಕಾರ್ಯಪಾಲಕ ಅಭಿಯಂತರರ ಸಂಖ್ಯೆ:ಯು.ಇ.ಡಿ:ಎಇಇ-2:433:2022-23, ದಿನಾಂಕ: 06.06.2022.
6. ಈ ಕಛೇರಿ ಪತ್ರ ಸಂಖ್ಯೆ:ಜಿಎಲ್5/172/2021-22, ದಿನಾಂಕ:30.06.2022.
7. ಕಾರ್ಯಪಾಲಕ ಅಭಿಯಂತರರ ಪತ್ರ ಸಂಖ್ಯೆ:ಯು.ಇ.ಡಿ:ಎಇಇ:1380:2022-23, ದಿನಾಂಕ:29.10.2022.
8. ಈ ಕಛೇರಿ ಪತ್ರ ಸಂಖ್ಯೆ:ಜಿಎಲ್5/172/2021-22, ದಿನಾಂಕ:02.11.2022.
9. ಕಾರ್ಯಪಾಲಕ ಅಭಿಯಂತರರ ಪತ್ರ ಸಂಖ್ಯೆ:ಯು.ಇ.ಡಿ:ಎಇಇ(ವಿ):1649:2022-23, ದಿನಾಂಕ:09.12.2022.
10. ದಿನಾಂಕ: 07-02-2023ರಂದು ನಡೆದ ಟೆಂಡರ್ ಪ್ರಕಟಣಾ ಪರಿಶೀಲನಾ ಸಮಿತಿ ಸಭೆ.
11. ಈ ಕಛೇರಿ ಆದೇಶ ಸಂಖ್ಯೆ:ಜಿಎಲ್5/172/2021-22, ದಿನಾಂಕ:16.03.2023.
12. ಕಾರ್ಯಪಾಲಕ ಅಭಿಯಂತರರ ಪತ್ರ ಸಂಖ್ಯೆ:ಯು.ಇ.ಡಿ:ಎಇಇ:295:2023-24, ದಿನಾಂಕ:13.06.2023.
13. ಪರಿಷ್ಕೃತ ಆದೇಶ ಸಂಖ್ಯೆ: ಜಿಎಲ್5/172/2021-22, ದಿನಾಂಕ:04.12.2023.
14. ಟೆಂಡರ್ ನೋಟಿಫಿಕೇಷನ್ ಸಂಖ್ಯೆ. ಯುಇಡಿ.ಡಿಬಿ.1/1178/2023-24, ದಿನಾಂಕ: 02-02-2024.
15. ಟೆಂಡರ್ ತಿದ್ದುಪಡಿ ಪ್ರಕಟಣೆ ಸಂಖ್ಯೆ: ಯು.ಇ.ಡಿ./ಡಿ.ಬಿ-1/1307/2023-24, ದಿ: 22.02.2024.
16. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಸಚಿವಾಲಯ, ವಿಧಾನಸೌಧ, ಬೆಂಗಳೂರು ಪತ್ರ ಸಿಎಸ್ 34 ಎಸ್‌ಸಿಎಂ 2024 (1), ದಿನಾಂಕ: 17-05-2024.
17. ಈ ಕಛೇರಿ ಆದೇಶ ಸಂಖ್ಯೆ ಜಿಎಲ್5/172/2021-22, ದಿನಾಂಕ 03.06.2024.
18. ಕಾರ್ಯಪಾಲಕ ಅಭಿಯಂತರರ ಪತ್ರ ಸಂಖ್ಯೆ:ಯು.ಇ.ಡಿ.ಬಿ-1/236/2024-25, ದಿನಾಂಕ:26.06.2024.
19. ಮಾನ್ಯ ಕುಲಪತಿಯವರ ಅನುಮೋದನೆ, ದಿನಾಂಕ: 04.07.2024.
20. ಈ ಕಛೇರಿ ಆದೇಶ ಸಂಖ್ಯೆ ಜಿಎಲ್5/172/2021-22, ದಿನಾಂಕ 16.07.2024.
21. ಟೆಂಡರ್ ನೋಟಿಫಿಕೇಷನ್ ಸಂಖ್ಯೆ. ಯು.ಇ.ಡಿ/ಡಿ.ಬಿ-1/862/2024-25, ದಿನಾಂಕ: 29-10-2024(Call-2).
22. ಕಾರ್ಯಪಾಲಕ ಅಭಿಯಂತರರ ಪತ್ರ ಸಂಖ್ಯೆ: ಯು.ಇ.ಡಿ.ಬಿ-1/1005/2024-25, ದಿನಾಂಕ:20-11-2024.
23. ಈ ಕಛೇರಿ ಪತ್ರ ಸಂಖ್ಯೆ:ಜಿಎಲ್5/172/2021-22, ದಿನಾಂಕ:21.11.2024.
24. ಕಾರ್ಯಪಾಲಕ ಅಭಿಯಂತರರ ಪತ್ರ ಸಂಖ್ಯೆ:ಯು.ಇ.ಡಿ.ಬಿ-1/1015/2024-25, ದಿನಾಂಕ:22.11.2024.
25. ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಟೆಂಡರ್ ಅಂಗೀಕಾರ ಹಾಗೂ ದರಸಂಧಾನ ಸಮಿತಿ ಸಭೆಯ ನಡಾವಳಿ ದಿನಾಂಕ 23-12-2024.
26. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ 02.01.2025.

## ಪ್ರಸ್ತಾವನೆ:-

ಉಲ್ಲೇಖಿತ ಆದೇಶದನ್ವಯ ವಿಶ್ವವಿದ್ಯಾನಿಲಯದ ವಿವಿಧ ಸಭೆ ಸಮಾರಂಭಗಳಿಗೆ ಲಘು ಉಪಹಾರ, ಭೋಜನ, ಕಾಫಿ, ಟೀ ಇತರೆ ಆಹಾರ ಪದಾರ್ಥಗಳನ್ನು ಅಂದಾಜು ವಹಿವಾಟು ರೂ.85,00,000-00 (ಎಂಭತ್ತೈದು ಲಕ್ಷ ರೂಪಾಯಿಗಳು ಮಾತ್ರ)ಗಳಲ್ಲಿ ಸರಬರಾಜು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (KTPP Act) 1999 ಹಾಗೂ 2000 ಅಧಿನಿಯಮಗಳನ್ನು ಅನುಸರಿಸಿ ನಿಯಮಾನುಸಾರ E-Procurement ಮುಖಾಂತರ ಟೆಂಡರ್ ಆಹ್ವಾನಿಸಲು ಉಲ್ಲೇಖ (13)ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಕಾರ್ಯಪಾಲಕ ಅಭಿಯಂತರರು ದಿನಾಂಕ 02.02.2024ರಂದು ಟೆಂಡರ್ ಪ್ರಕ್ರಿಯೆ ಕೈಗೊಂಡು ನಂತರ ದಿನಾಂಕ 22.02.2024ರಂದು ತಿದ್ದುಪಡಿ ಪ್ರಕಟಣೆ ಹೊರಡಿಸಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಏಕಮಾತ್ರ ಬಿಡ್‌ದಾರರು ಭಾಗವಹಿಸಿದ್ದು ಮರು ಟೆಂಡರ್ ಪ್ರಕಿಯೆ ಕೈಗೊಳ್ಳಲು ದಿನಾಂಕ 26.06.2024ರಂದು ಕಾರ್ಯಪಾಲಕ ಅಭಿಯಂತರರು ಅನುಮತಿ ಕೋರಿದ್ದರ ಮೇರೆಗೆ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ದಿನಾಂಕ 16.07.2024ರಂದು Call-1 ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಿ, ಅಲ್ಪಾವಧಿ ಮರು ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲು ಅನುಮೋದನೆ ನೀಡಲಾಗಿದೆ.

ಕಾರ್ಯಪಾಲಕ ಅಭಿಯಂತರರು ವಿಶ್ವವಿದ್ಯಾನಿಲಯ ತಾಂತ್ರಿಕ ವಿಭಾಗ ಇವರು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ 07 ದಿನಗಳ ಕಾಲಾವಕಾಶ ನೀಡಿ ಟೆಂಡರ್ ಪ್ರಕಟಣೆಯನ್ನು ದಿನಾಂಕ 29.10.2024 ರಂದು ಹೊರಡಿಸಲಾಗಿರುತ್ತದೆ (Tender Indent No. UOM/2023-24/SE0010/CALL-2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 05.11.2024ರ ಸಂಜೆ 04.30 ಗಂಟೆಗೆ ನಿಗಧಿಪಡಿಸಲಾಗಿರುತ್ತದೆ.

ಸದರಿ ಪ್ರಕಟಣೆಗೆ ಪ್ರತಿಕ್ರಿಯಿಸಿ, ಕೆಳಕಂಡ ಇಬ್ಬರು ಟೆಂಡರ್‌ದಾರರು ಟೆಂಡರ್ ಸಲ್ಲಿಸಿರುತ್ತಾರೆ. ಅದರಲ್ಲಿ ಒಬ್ಬರು ಟೆಂಡರ್‌ದಾರರಾದ ಎಸ್.ವಿ. ಗ್ರೂಪ್ಸ್ ಇವರು ಇ.ಎಂ.ಡಿ. ಮೊತ್ತವನ್ನು ಸಲ್ಲಿಸದೆ ಇರುವುದರಿಂದ ಇವರ ಟೆಂಡರ್‌ನ್ನು ಇ.ಎಂ.ಡಿ. ಹಂತದಲ್ಲೆ ತಿರಸ್ಕರಿಸಿ, ಉಳಿದ ಶ್ರೀಮತಿ ಶಿಲ್ಪ ಎನ್ ಮೆ। ನವನೀತ್ ಕೇಟರರ್ಸ್, ಮೈಸೂರು ಇವರು ಟೆಂಡರ್‌ನಲ್ಲಿ ಕೋರಲಾಗಿದ್ದ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಿದ್ದರಿಂದ ಇವರ ಬಿಡ್‌ನ್ನು ಅರ್ಹ ಟೆಂಡರ್ ಎಂದು ಪರಿಗಣಿಸಿ, ಆರ್ಥಿಕ ಬಿಡ್‌ನ್ನು ತೆರೆಯಲು ಅನುಮೋದನೆ ನೀಡಬೇಕೆಂದು ಉಲ್ಲೇಖ (22)ರಲ್ಲಿ ಕಾರ್ಯಪಾಲಕ ಅಭಿಯಂತರರು ಕೋರಿದ್ದರು.

| ಸ್ವೀಕರಿಸಲಾದ ಟೆಂಡರ್‌ಗಳ ಸಂಖ್ಯೆ/ಬಿಡ್ಡುದಾರರ ಹೆಸರು | | ಇ.ಎಂ.ಡಿ. ಹಂತದಲ್ಲಿ ತಿರಸ್ಕೃತಗೊಂಡ ಬಿಡ್‌ಗಳು | ಅಂಗೀಕಾರವಾದ ಬಿಡ್‌ಗಳು | ಷರಾ |
|---|---|---|---|---|
| 1. | ಶ್ರೀಮತಿ ಶಿಲ್ಪ, ಎನ್. ಮೆ। ನವನೀತ್ ಕೇಟರರ್ಸ್, ಮೈಸೂರು | 01 | 01 | ಟೆಂಡರ್ ದಾಖಲಾತಿ ವಿವರಗಳನ್ನು ಪರಿಶೀಲನೆ ಮಾಡಲಾಯಿತು. |
| 2. | ಎಸ್.ವಿ. ಗ್ರೂಪ್ಸ್ | | | |

ವಿಶ್ವವಿದ್ಯಾನಿಲಯದ ನಿರ್ದೇಶನದಂತೆ ದಿನಾಂಕ 19.11.2024ರಂದು ಟೆಂಡರ್ ಪರಿಶೀಲನಾ ಸಮಿತಿಯಲ್ಲಿ ಟೆಂಡರ್‌ದಾರರು ಇ-ಪೋರ್ಟಲ್ ಮುಖಾಂತರ ಸಲ್ಲಿಸಿರುವ ಎಲ್ಲಾ ಟೆಂಡರ್ ದಾಖಲತಿಗಳನ್ನು ತಾಂತ್ರಿಕ ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿ, ಕೆ.ಟಿ.ಪಿ.ಪಿ. ನಿಯಮಾನುಸಾರ ಟೆಂಡರ್ ಆಹ್ವಾನಿಸಿರುವುದನ್ನು ಹಾಗೂ ಟೆಂಡರ್‌ನಲ್ಲಿ ವಿಧಿಸಲಾಗಿರುವ ತ್ಹಾಂತ್ರಿಕ ಷರತ್ತುಗಳು ಸರ್ಕಾರದ Standard Tender document, K.G-3ರನ್ವಯ ಅಳವಡಿಸಿರುವುದನ್ನು ಗಮನಿಸಿ, ಟೆಂಡರ್‌ನಲ್ಲಿ ಭಾಗವಹಿಸಿರುವ ಇಬ್ಬರು ಟೆಂಡರ್‌ದಾರಲ್ಲಿ ಎಸ್.ವಿ.ಗ್ರೂಪ್ಸ್ – ಇ.ಎಂ.ಡಿ ಮೊತ್ತವನ್ನು ಪಾವತಿಸದ ಕಾರಣ ಇ.ಎಂ.ಡಿ ಹಂತದಲ್ಲಿ ಬಿಡ್ ಅನ್ನು ತಿರಸ್ಕರಿಸಲಾಗಿದೆ. ಉಳಿದಂತೆ ಶ್ರೀಮತಿ. ಶಿಲ್ಪ ಎನ್ – ನವನೀತ್ ಕೇಟರರ್, ಮೈಸೂರು ರವರು ಎಲ್ಲಾ ತಾಂತ್ರಿಕ ದಾಖಲಾತಿಗಳನ್ನು ಪರಿಶೀಲಿಸಿ, ಟೆಂಡರ್‌ನಲ್ಲಿ ಕೋರಲಾಗಿದ್ದ ಪೂರ್ಣ ಪ್ರಮಾಣದ ದಾಖಲಾತಿಗಳನ್ನು ಸಲ್ಲಿಸಿರುವುದರಿಂದ ಇವರ ಏಕ ಮಾತ್ರ ತಾಂತ್ರಿಕ ಬಿಡ್ ಎಂದು ಪರಿಗಣಿಸಿ ಹಾಗೂ ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ: ಆಇ 576 ವೆಚ್ಚ-12 2018,

ದಿನಾಂಕ: 22.05.2018ರ ಪತ್ರದ ನಿರ್ದೇಶನದ ಮೇರೆಗೆ ಏಕ ಬಿಡ್ ಅನ್ನು ಅಂಗೀಕರಿಸಬಹುದಾಗಿರುತ್ತದೆ ಎಂದು ಅಭಿಪ್ರಾಯಿಸಿ ಕಾರ್ಯಪಾಲಕ ಅಭಿಯಂತರರು ಉಲ್ಲೇಖ (24)ರ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ದಿನಾಂಕ 21.11.2024ರಂದು ಆರ್ಥಿಕ ಬಿಡ್‌ಗಳನ್ನು ತೆರೆದು ಪರಿಶೀಲಿಸಿ, ಬಿಡ್ ದರಗಳನ್ನು ಪಟ್ಟಿ ಮಾಡಿ ಬಿಡ್ ಮೊತ್ತದ ದರಗಳಿಗೆ ಕೆಳಕಂಡ ತುಲನಾತ್ಮಕ ತಃಖ್ತೆ ತಯಾರಿಸಲಾಗಿರುತ್ತದೆ

| ಕ್ರ. ಸಂ. | ಗುತ್ತಿಗೆದಾರರ ಹೆಸರು | ಟೆಂಡರ್ ಗಿಡಲಾದ ವಹಿವಾಟು ಮೊತ್ತ (ರೂ.ಗಳಲ್ಲಿ) | ಗುತ್ತಿಗೆದಾರರು ನಮೂದಿಸಿರುವ ಮೊತ್ತ | ಟೆಂಡರ್ ಮೊತ್ತದ ದರಗಳ ಮೇಲೆ ಅಧಿಕ/ಕಡಿಮೆ ದರಗಳು | ಷರಾ |
|---|---|---|---|---|---|
| 1 | ಶ್ರೀಮತಿ.ಶಿಲ್ಪ ಎನ್ – ನವನೀತ್ ಕೇಟರರ್ಸ್ , ಮೈಸೂರು | 85,00,000/- | 3,38,39,000/- | 370.39% ಅಧಿಕ | ಏಕ ಮಾತ್ರ ಬಿಡ್ |

ದಿನಾಂಕ 23.12.2024ರಂದು ಜರುಗಿದ ಟೆಂಡರ್ ಅಂಗೀಕಾರ ಹಾಗೂ ದರಸಂಧಾನ ಪ್ರಾಧಿಕಾರ ಸಮಿತಿ ಸಭೆಯಲ್ಲಿ ವಿಶ್ವವಿದ್ಯಾನಿಲಯದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಲಘು ಉಪಹಾರ/ಭೋಜನಾ ಇತ್ಯಾದಿಗಳನ್ನು ಸರಬರಾಜು ಮಾಡಲು 2021ರ ಆದೇಶದಲ್ಲಿ ನಿಗಧಿಪಡಿಸಲಾಗಿದ್ದ ದರದಲ್ಲೇ ವಿವಿಧ ಕಾರ್ಯಕ್ರಮಗಳಿಗೆ ಲಘು ಉಪಹಾರ/ಭೋಜನಾ ಇತ್ಯಾದಿಗಳನ್ನು ಶ್ರೀ ನವನೀತ್ ಕೇಟರರ್ಸ್, ಮೈಸೂರು ಇವರಿಂದ ಸೇವೆ ಪಡೆಯಲಾಗುತ್ತಿದೆ. ಆದರೆ ಈ ರೀತಿ ಹಿಂದಿನ ಟೆಂಡರ್ ದರಗಳಲ್ಲಿ ಅವಧಿ ಮುಗಿದ ನಂತರವೂ ಮೆ:ನವನೀತ್ ಕೆಟರರ್ಸ್, ಮೈಸೂರು ರವರಿಂದ ಸೇವೆ ಪಡೆಯಲಾಗುತ್ತಿರುವ ಬಗ್ಗೆ ಆಡಿಟ್ ಆಕ್ಷೇಪಣೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ದಿನಾಂಕ 03.06.2024ರಂದು ಟೆಂಡರ್ ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ ಏಕ ಮಾತ್ರ ಬಿಡ್ ಸ್ವೀಕರಿಸಲಾಗಿದ್ದರಿಂದ ಟೆಂಡರ್‌ನ್ನು ರದ್ದುಪಡಿಸಿ, ದಿನಾಂಕ 29.10.2024ರಂದು ಅಲ್ಪಾವಧಿ ಮರು ಟೆಂಡರ್ ಪ್ರಕ್ರಿಯೆ ಕ್ರಮಕೈಗೊಳ್ಳಲಾಗಿತ್ತು. ಎರಡನೇ ಬಾರಿಯೂ ಕೂಡ ಏಕ ಮಾತ್ರ ಬಿಡ್ ಸ್ವೀಕೃತವಾಗಿದ್ದು, ವಿಶ್ವವಿದ್ಯಾನಿಲಯವು ನಿಗಧಿಪಡಿಸಿದ ದರಗಳಿಗೆ ಬಿಡ್‌ದಾರರು ನಮೂದಿಸಿರುವ ದರಗಳಲ್ಲಿ ತುಂಬಾ ವ್ಯತ್ಯಾಸವಿರುವುದರಿಂದ ಸರ್ಕಾರದ ಸುತ್ತೋಲೆ ಸಂಖ್ಯೆ:ಆಇ 576 ವೆಚ್ಚ-12 2018, ದಿನಾಂಕ: 22-05-2018ರನ್ವಯ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ದರ ಸಂಧಾನ ಸಭೆಯನ್ನು ಏರ್ಪಡಿಸಲಾಗಿದ್ದು, ಸರ್ಕಾರದ ಸುತ್ತೋಲೆಯಲ್ಲಿ ಈ ಕೆಳಗಿನಂತೆ ಉಲ್ಲೇಖಿಸಿರುತ್ತದೆ.

ಏಕ ಬಿಡ್ ಟೆಂಡರ್‌ಗಳ ಕುರಿತು ಸೂಚನೆಗಳನ್ನು ಮತ್ತು ವ್ಯಾಖ್ಯಾನವನ್ನು ಉಲ್ಲೇಖಿತ 16ರ (1) ಹಾಗೂ (2) ರ ಸರ್ಕಾರದ ಸುತ್ತೋಲೆಗಳಲ್ಲಿ ನೀಡಲಾಗಿರುತ್ತದೆ. ಏಕ ಬಿಡ್ ಟೆಂಡರ್‌ಗಳು ಸ್ವೀಕೃತವಾದ ಸಂದರ್ಭಗಳಲ್ಲಿ, ಸದರಿ ಏಕ ಬಿಡ್ ಟೆಂಡರ್‌ಗಳನ್ನು ತಿರಸ್ಕರಿಸಿ, ಮರು ಕರೆಯುವುದು ಟೆಂಡರ್ ಆಹ್ವಾನಿಸುವ ಅಧಿಕಾರಿಯ ಪ್ರಥಮ ಆಯ್ಕೆಯಾಗಿರಬೇಕೆಂದು ಉಲ್ಲೇಖಿತ (1) ರ ಸುತ್ತೋಲೆಯ ಪರಿಚ್ಛೇದ 3.1 ರಲ್ಲಿ ಸೂಚಿಸಲಾಗಿರುತ್ತದೆ. ಆದರೆ ಏಕ ಬಿಡ್ ಟೆಂಡರ್ ಪರಿಗಣಿಸಲೇಬೇಕಾದಂತಹ ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ, ಟೆಂಡರ್ ದರಗಳು ಅಂದಾಜು ಮೊತ್ತಕ್ಕೆ ಹೋಲಿಸಿದಾಗ ಶೇ.5 ಕ್ಕಿಂತ ಹೆಚ್ಚುವರಿಯಾಗಿದ್ದಲ್ಲಿ ಅಥವಾ ಲಾಭಾಂಶವನ್ನು ಹೊಂದಿದ್ದಲ್ಲಿ, ಇ-ಸಂಗ್ರಹಣೆ ತಂತ್ರಾಂಶದಲ್ಲಿಯೇ ದರ ಸಂಧಾನ (negotiation) ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ.

ಮತ್ತೆ 3ನೇ ಬಾರಿ ಟೆಂಡರ್ ಆಹ್ವಾನಿಸಿದ್ದಲ್ಲಿ, ಇನ್ನೂ ಹೆಚ್ಚಿನ ಸಮಯಾವಕಾಶವು ಬೇಕಾಗುವುದರಿಂದ ಘಟಿಕೋತ್ಸವ ಮತ್ತು ಇನ್ನಿತರೆ ಸಭೆ ಸಮಾರಂಭಗಳಿಗೆ ತೊಂದರೆಯಾಗುತ್ತಿರುವುದನ್ನು ಗಮನಿಸಿ ಇದೊಂದು ಅಸಾಧರಣ ಸಂದರ್ಭವೆಂದು ಪರಿಗಣಿಸಿ ದರ ಸಂಧಾನ ಸಭೆಯಲ್ಲಿ ವಿಶ್ವವಿದ್ಯಾನಿಲಯವು ನಿಗಧಿಪಡಿಸಿರುವ ದರಗಳಿಗೆ ಮೇಲಿನ ಸರ್ಕಾರದ ಸುತ್ತೋಲೆ ಅನ್ವಯ ಶೇ.4.90 ದರವನ್ನು ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವಂತೆ ಹೆಚ್ಚಿಸಿ ಸರಬರಾಜು ಮಾಡಲು ವಿಶ್ವವಿದ್ಯಾನಿಲಯದ ಮನವಿಗೆ ಬಿಡ್‌ದಾರರು ಆಹಾರ ಪದಾರ್ಥಗಳನ್ನು ಸರಬರಾಜು ಮಾಡಲು ಒಪ್ಪಿಗೆ ನೀಡಿ ದಿನಾಂಕ:23-12-2024ರಂದು ಲಿಖಿತ ಪತ್ರ ನೀಡಿರುವುದರಿಂದ ಒಂದು ವರ್ಷದ ಅವಧಿಗೆ ಮಾತ್ರ ಸೀಮಿತಗೊಂಡಂತೆ ಸರಬರಾಜು ಮಾಡಲು ದರಸಂಧಾನ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

| Sl.No. | Item Name | University Quoted Rate | As per Government Circular and after negotiation the Final Rate Approved i.e 4.90% enhanced |
|---|---|---|---|
| 1 | Seminar | 155.00 | 163.00 |
| 2 | Syndicate Meeting | 175.00 | 184.00 |
| 3 | Foundation Stone Line | 115.00 | 121.00 |
| 4 | Building opening ceremony | 115.00 | 121.00 |
| 5 | Foundation Day | 300.00 | 315.00 |
| 6 | Convocation | 155.00 | 163.00 |
| 7 | Convocation (VIP) | 175.00 | 184.00 |
| 8 | Teachers Day | 155.00 | 163.00 |
| 9 | Meeting | 35.00 | 37.00 |
| 10 | General Meeting | 30.00 | 31.00 |
| 11 | National Festival Days | 115.00 | 121.00 |

L1 ಬಿಡ್‌ದಾರರದ ಮೆ.ನವನೀತ್ ಕೇಟರರ್ಸ್, ಮೈಸೂರು ಇವರಿಂದ ಲಘು ಉಪಹಾರ, ಭೋಜನ, ಕಾಫಿ/ಟೀ ಇತ್ಯಾದಿ ಆಹಾರ ಪದಾರ್ಥಗಳ ಸರಬರಾಜು ಪಡೆಯಲು ಸನ್ಮಾನ್ಯ ಕುಲಪತಿಯವರು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ:ಜಿಎಲ್.5/172/2021-22, ದಿನಾಂಕ: 02ನೇ ಜನವರಿ 2025**

ಮಾನ್ಯ ಕುಲಪತಿಯವರ ಅನುಮೋದನೆ ಮೇರೆಗೆ, ಮೆ.ನವನೀತ್ ಕೇಟರರ್ಸ್, ಮೈಸೂರು ಇವರಿಂದ ಒಂದು ವರ್ಷದ ಅವಧಿಗೆ ವಿಶ್ವವಿದ್ಯಾನಿಲಯದ ಎಲ್ಲಾ ಕಛೇರಿಗಳಲ್ಲಿ ಮತ್ತು ವಿಭಾಗಗಳಲ್ಲಿ ನಡೆಯುವ ವಿವಿಧ ಶೈಕ್ಷಣಿಕ ಕಾರ್ಯಕ್ರಮ ಮತ್ತು ಸಭೆಗಳಿಗೆ ಲಘು ಉಪಹಾರ, ಭೋಜನ, ಕಾಫಿ/ಟೀ ಇತ್ಯಾದಿ ಆಹಾರ ಪದಾರ್ಥಗಳನ್ನು ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ದರಪಟ್ಟಿಯ ಪ್ರಕಾರ ಕೆಳಗಿನ ದರಪಟ್ಟಿಯಲ್ಲಿ ನಮೂದಿಸಿರುವ ದರಗಳನ್ವಯ ಸರಬರಾಜು ಪಡೆಯಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

| Sl.No. | Particulars | Rate per Items Amt (Rs.) |
|---|---|---|
| 1 | Seminar | 163.00 |
| 2 | Syndicate Meeting | 184.00 |
| 3 | Foundation Stone Line | 121.00 |
| 4 | Building opening ceremony | 121.00 |
| 5 | Foundation Day | 315.00 |
| 6 | Convocation | 163.00 |

| | | |
|---|---|---|
| 7 | Convocation (VIP) | 184.00 |
| 8 | Teachers Day | 163.00 |
| 9 | Meeting | 37.00 |
| 10 | General Meeting | 31.00 |
| 11 | National Festival Days | 121.00 |

ಮೈಸೂರು ವಿಶ್ವವಿದ್ಯಾನಿಲಯದ ಸಭೆ, ಸಮಾರಂಭ ಅಥವಾ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಆಹಾರ (ಲಘು ಉಪಹಾರ, ಕಾಫಿ, ಟೀ ಮತ್ತು ಭೋಜನ ಕೂಟ) ಸರಬರಾಜು ಮೆ: ನವನೀತ್ ಕೇಟರರ್ಸ್, ಮೈಸೂರು ಅವರಿಂದ ಪಡೆಯಲು ತಿಳಿಸಲಾಗಿದೆ. ಇವರನ್ನು ಹೊರತುಪಡಿಸಿ ಬೇರೆಯವರಿಂದ ವಿವಿಧ ಶೈಕ್ಷಣಿಕ ಕಾರ್ಯಕ್ರಮ ಮತ್ತು ಸಭೆಗಳಿಗೆ ಲಘು ಉಪಹಾರ, ಭೋಜನ, ಕಾಫಿ/ಟೀ ಇತ್ಯಾದಿ ಆಹಾರ ಪದಾರ್ಥಗಳನ್ನು ಸರಬರಾಜು ಪಡೆದಲ್ಲಿ ಈ ಸಂಬಂಧದ ಆಡಿಟ್ ಆಕ್ಷೇಪಣೆಗೆ, ಸಂಬಂಧಪಟ್ಟವರೆ ನೇರ ಹೊಣೆಗಾರರಾಗಿರುತ್ತಾರೆ ಎಂಬುದಾಗಿ ತಿಳಿಯಪಡಿಸಿದೆ.

ಆದೇಶದ ಮೇರೆಗೆ

02/01/2025

ಕುಲಸಚಿವ

**ಇವರಿಗೆ;**

1. ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾನಿಲಯ ಇಂಜಿನಿಯರಿಂಗ್ ವಿಭಾಗ, ಮಾನಸಗಂಗೋತ್ರಿ, ಮೈಸೂರು– ಮೆ: ನವನೀತ್ ಕೇಟರರ್ಸ್ ರವರಿಂದ ನಿಯಮಾನುಸಾರ ಅಗತ್ಯ ದಾಖಲೆ ಹಾಗೂ ಕಾರಾರು ಒಪ್ಪಂದ ಒಳಪಡಲು ಸೂಚಿಸಲಾಗಿದೆ.
2. ಮೆ: ನವನೀತ್ ಕೇಟರರ್ಸ್, ನಂ.12/ಬಿ, ಶ್ರೀ ವಿಶ್ವಕರ್ಮ ಹಾಸ್ಟಲ್, ಯೂತ್ ಹಾಸ್ಟಲ್ ಎದುರು, ಸರಸ್ವತಿಪುರಂ, ಮೈಸೂರು
3. ವಿಶ್ವವಿದ್ಯಾನಿಲಯದ ಎಲ್ಲಾ ಅಂಗಸಂಸ್ಥೆಗಳ ಮುಖ್ಯಸ್ಥರುಗಳಿಗೆ ಮತ್ತು ಬಟಾವಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
4. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
5. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
6. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು
7. ಅಪರ ನಿರ್ದೇಶಕರ ಕಛೇರಿ, ಪರೀಕ್ಷಾ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
8. ನಿರ್ದೇಶಕರು, ಮಾಹಿತಿ ಮತ್ತು ಸಂವಹನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
9. ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು, (ಸಾಮಾನ್ಯ/ಶೈಕ್ಷಣಿಕ/ಪ್ರಾಧಿಕಾರ/ಅಭಿವೃದ್ಧಿ) ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
10. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು.
11. ಕಛೇರಿ ಪ್ರತಿ.